ದಿನಾಂಕಃ **01.08.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಎಸ್,ಎಸ್.ಡಿ ರವರಿಂದಃ

**I play I learn** ಸ್ವಾಧೀನ ಅನುಭವವನ್ನು ದಿಃ**01.09.2016** ರಂದು ಕೊಟ್ಟಿರುತ್‌ತೇನೆ. ಸ್ವಾಧೀನ ಅನುಭವವನ್ನು ಪ್ರತಿವಾದಿಗೆ ಬಿಟ್ಟು ಕೊಟ್ಟಿರುವುದಕ್ಕೆ ಸಂಬಂಧಿಸಿ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ಶಾಲೆಯ ಸ್ವಾಧೀನ ಅನುಭವವನ್ನು ಪ್ರತಿವಾದಿಗೆ ಕೊಟ್ಟಿರುವುದಿಲ್ಲದ ಆದ್ದರಿಂದ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ನನ್ನ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ. **2016-2017** ನೇ ಇಸವಿಯ ವರ್ಷದ ಎಲ್ಲಾ ರೀತಿಯಾದ ಫಿಸ್ ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪಡೆದುಕೊಂಡಿದ್ದೆ. ಸದರಿ ಹಣದ ಪೈಕಿ ಯಾವುದೇ ಹಣವನ್ನು ನಾನು ಪ್ರತಿವಾದಿಗೆ ಕೊಟ್ಟಿರುವುದಿಲ್ಲ. **New Age Knowledge solutions** ಎನ್ನುವ ಹೆಸರು **I play I learn** ಶಾಲೆಯ ಮೂಲ ಹೆಸರು ಆಗಿರುತ್ತದೆ. **New Age Knowledge solutions** ಶಾಲೆಯ ಮಾಲೀಕರಿಂದ **I play I learn** ಶಾಲೆಯನ್ನು ಮಾರಾಟ ಮಾಡಲು ಯಾವುದೇ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮೌಖಿಕವಾಗಿ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ಶಾಲೆಯನ್ನು ಮಾರಾಟ ಮಾಡಲು ಮೂಲ ಮಾಲೀಕರಿಂದ ಅನುಮತಿ ಪಡೆಯಬೇಕು ಎನ್ನುವ ನಿಯಮ ಇರುತ್ತದೆ. ನನ್ನ ಮತ್ತು ಪ್ರತಿವಾದಿಯ ನಡುವೆ ಶಾಲೆಗೆ

ಸಂಬಂಧಿಸಿದಂತೆ ಯಾವುದೇ ವಹಿವಾಟು ನಡೆದಿರುವುದಿಲ್ಲ ಆದ್ದರಿಂದ ಅನುಮತಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. **I play I learn** ಶಾಲೆಯನ್ನು ನಡೆಸಲು ನೀವು ರಾಜ್ಯ ಸರ್ಕಾರದಿಂದ ಅನುಮತಿಯನ್ನು ಪಡೆದಿರುತೀರಾ ಎಂದರೆ ಸಾಕ್ಷಿಯು ನಾನು ನಡೆಸುತ್ತಿದ್ದ ಶಡಲೆಯು **Play Home** ಆಗಿತ್ತು **Play Home** ಗೆ ಅನುಮತಿ ಬೇಕಾಗಿಲ್ಲ ಎಂದು ನುಡಿಯುತ್ತಾರೆ.

ನಾನು ಮತ್ತು ಪ್ರತಿವಾದಿ ಜಂಟಿ ಆಗಿ **4** ಕಡೆ **Real Estate** ವ್ಯವಹಾರ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ದಿಃ**18.09.2016** ಮತ್ತು **19.09.2016** ರಂದು ಕ್ರಮವಾಗಿ **49** ಸಾವಿರ ಪಾವತಿಸಿರುವ ಹಣವು ನನ್ನ ಪತ್ನಿಯ ಬ್ಯಾಂಕ್ ಖಾತೆಗೆ ಪಾವತಿಸಿರುವ ನನ್ನ ಮತ್ತು ಪ್ರತಿವಾದಿಯ ನಡುವೆ **Real Estate** ವ್ಯವಹಾರಕ್ಕೆ ಸಂಬಂಧಿಸಿದ ಹಣ ಆಗಿರುತ್ತದೆ ಎಂದರೆ ಸರಿಯಲ್ಲ. **2016** ನೇ ಇಸವಿಯಲ್ಲಿ ಪ್ರತಿವಾದಿಯ ವಿರುದ್ಧ **Mico Layout police** ಠಾಣೆಯಲ್ಲಿ ದೂರನ್ನು ದಾಖಲಿಸಿದ್ದೆ. ಸದರಿ ದೂರಿನಲ್ಲಿ ಪ್ರತಿವಾದಿ ಮತ್ತು ನನ್ನ ನಡುವೆ ವ್ಯವಹಾರ ನಡೆದಿರುತ್ತದೆ ಸದರಿ ಹಣವನ್ನು ಪ್ರತಿವಾದಿಯಿಂದ ಕೊಡಿಸಬೇಕು ಎಂದು ದೂರನ್ನು ದಾಖಲಿಸಿದೆ ಎಂದರೆ ಸರಿಯಲ್ಲ. ನನ್ನ ಮುತ್ತ ಪ್ರತಿವಾದಿಯ ನಡುವೆ ಶಾಲಾ ಮಾರಾಟಕ್ಕೆ ಸಂಬಂಧಿಸಿ ಯಾವುದೇ ವವಹಾರ ನಡೆದಿಲ್ಲ ಆದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**3** ಮತ್ತು **4** ಚೆಕ್ ಗಳನ್ನು ಪ್ರತಿವಾದಿ ಮತ್ತು

ನನ್ನ ನಡುವಿನ **Real Estate** ವ್ಯವಹಾರಕ್ಕೆ ಸಂಬಂಧಿಸಿ ಪ್ರತಿವಾದಿಯು ಸೆಕ್ಯೂರಿಟಿ ಕಾರಣಕ್ಕಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ನನ್ನ ನಡುವೆ ಆಗಲಿ ಅಥವಾ ಪ್ರತಿವಾದಿ ಅಥವಾ ನನ್ನ ಪತ್ನಿಯ ನಡುವೆ ಆಗಿಲ್ಲ ಶಾಲೆ ಮಾರಾಟಕ್ಕೆ ಸಂಬಂಧಿಸಿ ಯಾವುದೇ ವವಹಾರ ನಡೆದಿಲ್ಲ ಆದರೂ ಈ ಬಗ್ಗೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿದ ರೀತಿಯಲ್ಲಿ ಯಾವುದೇ ಹಣವನ್ನು ಪ್ರತಿವಾದಿಯು ನನಗೆ ಕೊಡಬೇಕಾಗಿಲ್ಲ ಮತ್ತು ದಾವೆಯಲ್ಲಿ ಕೇಳಿರುವ ಬಡ್ಡಿ ಹಣಕ್ಕೆ ನಾನು ಅರ್ಹನು ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.